# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ

## ಬಿತ್ತುವವನು ಮತ್ತು ಬೀಜ



ಬರಹಗಾರರು: Edward Hughes
ಚಿತ್ರಲೇಖಕರು: M. Maillot; Lazarus
ಅಳವಡಿಸುವವರು: E. Frischbutter; Sarah S.
ಪದ್ಮಾ ಸ್ಮೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಒಂದು ದಿವಸ ಯೇಸು ಕೆರೆಯದಂಡಯ
ಹತ್ತಿರ ಜನರಿಗೆ ಭೋಧಿಸಿದನು.
ತುಂಬಾಜನರು ಸೇರಿ ಬಂದದ್ದರಿಂದ
ಜನ ಸಮೂಹವು ದೊಡ್ಡದಾಯಿತು.

ಯೇಸು ಏನನ್ನು
ಮಾಡಬಹುದು?



ಸಮೀಪದಲ್ಲಿದ್ದ ದೋಣಿಯನ್ನು ನೋಡಿ
ಅದನ್ನು ಹತ್ತಿ ಕೂಳಿತುಕೊಂಡನು.



ಯೇಸು ಜನರನ್ನು ಮತ್ತು ಜನರು ಯೇಸುವನ್ನು ನೋಡಬಹುದಲ್ಲದೆ ಆತನು ಏನು ಹೇಳುತ್ತಾನೆಂಬುದನ್ನು ಸುಲಭವಾಗಿ ಕೇಳಿಸಿಕೋಳ್ಳಬಹುದಾಗಿತ್ತು. ಯೇಸು ಸಾಮ್ಯಗಳ ರೂಪದಲ್ಲಿ ಅನೇಕ ಸಾಮಾನ್ಯ ಕಥೆಗಳನ್ನು

ಹೇಳಲಾರಂಬಿಸಿದನು,

ಅವು ದೇವರ ಬಗ್ಗೆ ಭೋಧಿಸಿದವು.



"ಒಬ್ಬ ರೈತನು ಹೊಲದಲ್ಲಿ ಬೀಜಗಳನ್ನು ಬಿತ್ತುವಹಾಗೆ",
ಯೇಸು ತನ್ನ ಶಬ್ದಗಳಿಂದ ಆ ಕಥೆಯನ್ನು ಚಿತ್ರಿಸಿದನು.



ಜನರು ಬಿತ್ತುವವನ ಚಿತ್ರನವನ್ನು ಗ್ರಹಿಸಲು ಸಾಧ್ಯವಾಯಿತು ಏಕೆಂದರೆ ಅನೇಕ ಸಾರಿ ನೋಡಿದ್ದರು.



ಬಿತ್ತುವಾಗ ಕೇಲವು ಬೀಜ ದಾರಿಯ
ಮಗ್ಗಲಲ್ಲಿ ಬಿದ್ದವು, ಹಕ್ಕಿಗಳು ಬಂದು
ಅವುಗಳನ್ನು ತಿಂದುಬಿಟ್ಟವು.



ಬೇರೆ ಕೇಲವು ಬೀಜ ಬಹಳ ಮಣ್ಣಿಲ್ಲದ ಬಂಡೆಯ
ನೆಲದಲ್ಲಿ ಬಿದ್ದವು, ಅಲ್ಲಿ ಮಣ್ಣು ತೆಳ್ಳಗಿದ್ದದರಿಂದ ಅವು
ಬೇಗ ಮೊಳೆತವು ಆದರೆ ಬಿಸಿಲೇರಿದಾಗ ಬಾಡಿ ಆಳವಾದ
ಬೇರಿಲ್ಲದ ಕಾರಣ ಒಣಗಿಹೋದವು.



ಮತ್ತೆ ಹಲವು ಬೀಜ ಮುಳ್ಳು ಗಿಡಗಳಲ್ಲಿ
ಬಿದ್ದವು ಮುಳ್ಳುಗಿಡಗಳು ಬೆಳೆದು
ಅವುಗಳನ್ನು ಅಡಗಿಸಿಬಿಟ್ಟಿದ್ದರಿಂದ
ಅವುಗಳಿಗೆ ಬೇಕಾದ ಬೇಳಕು
ನೀರು ದೊರೆಯಲಿಲ್ಲ.



ಇನ್ನೂ ಹಲವು ಬೀಜ ಒಳ್ಳೇಯ ನೆಲದಲ್ಲಿ ಬಿದ್ದು,
ಆರೋಗ್ಯವಾಗಿ ಬೇಳೆದು ಸಮ್ರುದ್ಧಿಯ ಫಲವನ್ನು ಕೊಟ್ಟವು.
ಇದನ್ನು ನೋಡಿ ಬಿತ್ತುವವನಿಗೆ ತುಂಬಾ ಸಂತೋಷವಾಗಿರಬಹುದು.



ಈ ಕಥೆಯನ್ನು ಹೇಳಿದನಂತರ ಆತನ ಶಿಷ್ಯರು ಯೇಸುವಿನ ಬಳಿಗೆ ಬಂದು "ನೀನು ಯಾಕೆ ಸಾಮ್ಯಗಳ ಮೂಲಕ ಬೋಧಿಸುತ್ತಿ?" ಎಂದು ಕೇಳಿದರು.



ಜನರು ದೇವರನ್ನು ನೀಜವಾಗಿಯು ಪ್ರೀತಿಸುವುದಾದರೆ ಯೇಸು ಹೇಳುವ ಸಾಮ್ಯಗಳು ಅರ್ಥವಾಗುತ್ತಿದ್ದವು. ದೇವರನ್ನು ಪ್ರೀತಿಸದ ಜನರಿಗೆ ಸಾಮ್ಯಗಳು ಅರ್ಥವಾಗುವುದಿಲ್ಲ.



ಯೇಸು ಬಿತ್ತುವವನ ಸಮ್ಯದ ಅರ್ಥವನ್ನು
ತಿಳಿಯಪಡಿಸಿದನು. ಆತನು ಹೇಳಿದ್ದು ಬೀಜವೆ
‘ದೇವರ ವಾಕ್ಯ’ ವೆಂಬುವುದಾಗಿ.




ದಾರಿಯ ಮಗ್ಗಲಲ್ಲಿ ಬಿದ್ದಿರುವ ಬೀಜ ಅಂದರೆ
ಯಾವನು ದೇವರ ವಾಕ್ಯವನ್ನು ಕೇಳಿ ಅದನ್ನು
ಅರ್ಥಮಾಡಿಕೋಳ್ಳದೆ ಇರುವವನು. ಸೈತಾನನು ದೇವರ
ವಾಕ್ಯವನ್ನು
ಮರೆಯುವಂತೆ
ಮಾಡುತ್ತಾನೆ.

ಕೇಲವರು ದೇವರ ವಾಕ್ಯವನ್ನು ಕೇಳಿದ ಕೂಡಲೆ ಸಂತೋಷದಿಂದ ಸ್ವಿಕರಿಸಿಸುತ್ತಾರೆ, ಇವರೆ ಬೀಜಬಿದ್ದ ಬಂಡೆಯ ನೆಲವಾಗಿರುವರು. ಆದರೆ ಆ ವಾಕ್ಯದ ನಿಮಿತ್ಯವಾಗಿ ಸಂಕಟವಾಗಲಿ ಹಿಂಸೆಯಾಗಲಿ ಬಂದಾಗ ಅರರಿಗೆ ದು:ಖವು ಆವರಿಸುತ್ತದೆ.



ಇದೇ ಜನರು ಯೇಸುವನ್ನು ಸಂತೋಷದಿಂದ ಹಿಂಬಾಲಿಸಬೇಕೆಂದಿದ್ದವರು ದೇವರಿಂದ ದೂರವಾಗಿ ದೇವರ ವಾಕ್ಯಕ್ಕೆ ಅವಿಧೆಯರಾಗುತ್ತಾರೆ. ಅವರು ದೇವರನ್ನು ಹಿಂಬಾಲಿಸುವುದರಿಂದ ಬರುವಂತ ಹಿಂಸೆಯನ್ನು ತಾಳಿಕೊಳ್ಳಲು ಸಿದ್ದರಿಲ್ಲ, ಎಂಥಹ ದು:ಖಕರವೆಂದರೆ ‘ದೇವರನ್ನು ಮೆಚ್ಚಿಸುವ ಬದಲಾಗಿ ಸ್ನೇಹಿತರನ್ನು ಮೆಚ್ಚಿಸಲಿಚ್ಚಿಸುತ್ತಾರೆ’.



ಆ ಸಾಮ್ಯದಲ್ಲಿ ಮುಳ್ಳುಗಳೆಂದರೆ, ಇಹ ಲೋಕದ ಚಿಂತೆ ಹಾಗೂ ಹಣದ ಪ್ರೀತಿಯ ಕೆಲವು ಜನರ ಜೀವಿತವನ್ನು ಮುಳುಗಿಸುವುದಾಗಿದೆ. ಅವರು ಹಣವನ್ನು ಸಂಪಾದಿಸುವುದರಲ್ಲಿಯೂ ಇತರ ವಸ್ತುಗಳನ್ನು ಸಂಗ್ರಹಿಸುವುದರಲ್ಲಿಯೂ ತೊಡಗಿ, ದೇವರನ್ನು, ಅವರ ಜೀವಿತದಿಂದ ದೂರಕ್ಕೆ ಹಾಕುತ್ತಾರೆ.



ಮತ್ತೆ ಕೆಲವು ಬೀಜ ಫಲವತ್ತಾದ ಭೂಮಿಯಲ್ಲಿ ಬಿದ್ದು ಒಳ್ಳೆಯ ಫಲವನ್ನು ಕೊಡುವುದೆಂದರೆ ದೇವರ ವಾಕ್ಯವು ಜನರಲ್ಲಿ ಪ್ರವೇಶಿಸಿ ಅವರ ಜೀವಿತಗಳನ್ನು ಬದಲಾಯಿಸುವಂತಹದಾಗಿದೆ, ಇಂತಹ ಜನರು ದೇವರ ಸೇವೆಯನ್ನು ಹಾಗೂ ದೇವರನ್ನು ಗೌರವಿಸುತ್ತಾರೆ.



ಜನರ ಗುಂಪು ಯೇಸುವನ್ನು ಬಿಟ್ಟುಹೋಗಲು ಬಯಸಲಿಲ್ಲ. ಅನೇಕರು ದೇವರನ್ನು ಹಿಂಬಾಲಿಸಿ ಆತನನ್ನು ಮೆಚ್ಚಿಸಬೇಕೆಂದಿದ್ದರು. ಆದರೆ ಯೇಸುವಿನ ಸಾಮ್ಯಗಳಿಂದ ಹೇಗೆ ದೇವರಿಗೆ ವಿದೇಯರಾಗಬೇಕೆಂಬುದು ಅವರಿಗೆ ಅರ್ಥವಾಯಿತು.



ಬಿತ್ತುವವನು ಮತ್ತು ಬೀಜ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**ಮತ್ತಾಯ 13**

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

# ಮುಕ್ತಾಯ

43

60

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16